

(6ನೇ ಪುಟದಿಂದ)

ಮೈಮೇಲೆ ಮಳೆ ಹನಿಗಳ ಲೀಲೆ... ಕೂದಲಿನಿಂದಿಳಿದು, ಕೆನ್ನೆಮೇಲೆ ಜಾರಿ ಕೆಳಗೆ ತೊಟ್ಟಿಕ್ಕಿದಾಗ.. ಮನಸೆಲ್ಲ ನೆನಪುಗಳಿಂದ ಒದ್ದೆ ಒದ್ದೆ..!

ಕತ್ತಲೆಯ ರಾತ್ರಿಯೊಳು ಮನೆ ಯಾವಾಗ ಮುಟ್ಟುವೆವು ಎಂಬ ನಿರೀಕ್ಷೆಯ ನಡುವೆಯೂ... ಕೊನೆಯಾಗದ ಪಯಣವಾಗಲಿ ಎಂದೆನಿಸದೇ ಇರದು. ರಸ್ತೆಗೆಷ್ಟೇ ಗುಂಡಿಗಳು ಬಿದ್ದಿರಲಿ... ಕೆಸರು, ಕೊಚ್ಚೆ ಎಲ್ಲಾ ಒಂದೇ ಎನ್ನುವಂತೆ ಹರಿಯುತ್ತಿರಲಿ... ಕಾಲಿಡುವ ಮುನ್ನ ಎಲ್ಲಾ ಇಶ್ಶೀ... ಎನಿಸಿದರೂ... ತೊಯ್ದ ಮೇಲೆ ಮಾತ್ರ ಯಾವ ಭಾವವೂ ಬರದು. ನೆನಪುಗಳ ಮಳೆ, ಮೆರವಣಿಗೆ ಎರಡರ ದಿಬ್ಬಣ ಶುರುವಾಗುತ್ತದೆ.

ಕಾರ್ಮೋಡ ಕವಿದ ರಾತ್ರಿಯಲ್ಲಿ ಮಳೆಗೆ ನೆನದು ಮನೆಗೆ ಹೋದರೆ ಬಿಸಿಬಿಸಿ ಅನ್ನ. ಮತ್ತೆ ನೆನಪುಗಳ ಯಾತ್ರೆ. ತಾಪದೊಳು ಬೆಂದು, ಅಕ್ಕಿ ಅರಳಿ, ಬಿಸಿಯಗುಳು ಆಗುವುದು. 'ಘೊಂಗಡಿ ತಾ...' ಅನ್ನುವ ಧ್ವನಿ ದೂರದ ಗದ್ದೆಯಿಂದ ಕೇಳಿ ಬರದೇ ಇರದು. ಉತ್ತರ ಕರ್ನಾಟಕದಲ್ಲೆಲ್ಲ ಕಂಬಳಿ ಹೊದ್ದು ಹೊಲಗದ್ದೆಗಳಿಗೆ ಹೋಗಿ ನಾಟಿ ಮಾಡ್ತಾರೆ. ರೈತ, ರೈತ ಮಹಿಳೆಯರು ಸಾಲು ಸಾಲಾಗಿ ನಿಂತು, ಸಸಿ ನಾಟಿ ಮಾಡಿ, ನೀರಲ್ಲಿ ನೆನೆದೇ ಬೆಳೆಸುವ ಈ ಅಕ್ಕಿಯಗುಳು ನಮಗೆ ಅನ್ನವಾದಾಗ... ನೆನೆನೆನೆಯಲೇ ಬೇಕು ಅವರನ್ನೊಮ್ಮೆ.

ಜೀಂಗುಡುವ ಮಳೆಗೆ ಹೆದರಿ ಮನೆಯೊಳಗೇ ಉಳಿದು ಕಿಟಕಿ ತೆಗೆದು ನೋಡಿದರೆ ಕೊಡೆಗಳ ಸಂತೆ. ಒಂದೊಂದು ಬಣ್ಣದ ಕೊಡೆಯ ಅಡಿಗೂ ಒಂದೊಂದು ಕತೆಯ ಕಂತೆ. ಮಗುವಿಗೆ ಶಾಲೆಯಿಂದ ಕರೆದೊಯ್ಯಲು ಬಂದ ಅಮ್ಮನೋ, ಶಾಲೆ ಹೋಗುತ್ತಿರುವ ಹುಡುಗಿಯೋ... ದಿನದ ಸಂತೆಯಲ್ಲಿ ತರಕಾರಿ ಮಾರಲು ಬಂದ ಅಜ್ಜಿಯೋ... ಮುಖದ ನೆರಿಗೆಯಲ್ಲಿ, ಹರೆಯದ ಮೊಡವೆಯಲ್ಲೂ ಮಳೆಹನಿಗಳಷ್ಟೇ ನೆನಪುಗಳು. ಎಲ್ಲವೂ ಹಿಂಗೊಮ್ಮೆ ಸುರಿದು, ಹಂಗೊಮ್ಮೆ ಹರಿದು, ಮನದೊಳಗೆ ಹಿಂಗಿ ಎದೆ ಹಸಿರಾಗಿಸುವವು.

ಹೆಂಚಿನ ಮನೆಯ ಮೇಲೆ ಮಳೆಯ ರಾಗತಾನಗಳೇ ಬೇರೆ. ಟಿನ್ ಶೆಡ್ಡಿನ ಮೇಲೆಯೂ ಮಳೆಯ ತಿಲ್ಲಾನವೇ ಬೇರೆ. ರಾತ್ರಿ ಇಡೀ ಸುರಿದು, ಬೆಳಗಿನ ಸೂರ್ಯನಿಗೆ ಮೋಡದ ಹೊದಿಕೆ ಹೊದ್ದಿಸಿ ಮರೆಯಾಗುವ ಮಳೆ, ಹುಲ್ಲಿನ ಮೇಲೆ ಹರಳಿನ ಬಿಂದುಗಳನ್ನಿಟ್ಟು ಹೋಗಿರುತ್ತದೆ. ಎಳೆಬಿಸಿಲು ಬಿದ್ದು ಫಳ್ ಅಂತ ಹೊಳೆದರೆ ಅದ್ಯಾಕೋ ಅಮ್ಮನ ನೆನಪು. ಅಮ್ಮನಿಗೆ ನನ್ನ ಮೂಗುತಿಯ ಮಿಂಚು ನೆನಪಾಗುವುದೂ ಅಂಗಳದಲ್ಲಿ ಬಿದ್ದ ಮಂಜಿನ ಹನಿ ಕಂಡಾಗಲೇ... ಮಳೆ ಸುರಿದು ಮರೆಯಾಗಿ, ಹನಿಗಳೆಲ್ಲ ಕಣ್ಣಿಂದಾಚೆ ಬರದಂಥ ಕ್ಷಣ ಅದು. ಮನಸು ಹಗುರ... ನೆನಪಿನ ಮೋಡಗಳೆಲ್ಲ ಚದುರಿ ಮತ್ತದೇ ಬೆಳಕಿನ ನೋಟ.



